ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಜಾಗತಿಕ ಬ್ಯಾಂಕ್‌ನಿಂದ ೭೫ ಲಕ್ಷ ರೂಪಾಯಿ ಮಂಜೂರಾಗಿದೆ ಎಂದು ಮಂತ್ರಿಗಳು ಹೇಳಿದ್ದಾರೆ. ಅದು ಮಂಜೂರಾಗಿ ಎಷ್ಟು ದಿವಸವಾಯಿತು ? ಹಣ ಮಂಜೂರಾದ ಮೇಲೆ ೫–೬ ವರ್ಷಗಳ ಕಾಲ ಕೆಲಸ ನಡೆದರೆ ವಿಶ್ವಬ್ಯಾಂಕಿಗೆ ಕೊಡತಕ್ಕ ಬಡ್ಡಿ ಎಷ್ಟಾಗುತ್ತದೆ ? ೧೯೮೭ಕ್ಕೆ ಕೆಲಸ ಪೂರ್ತಿಯಾಗುತ್ತದೆ ಎಂದು ಹೇಳಿದ್ದೀರಿ. ಈ ರೀತಿ ೫ ವರ್ಷ ದವರೆಗೆ ಮುಂದುವರಿಸಿದರೆ ಅಲ್ಲಿನ ಜನರ ಪರಿಸ್ಥಿತಿ ಏನು ? ಭೂ ಸ್ವಾಧೀನತೆಯ ಸಲುವಾಗಿ ೮–೧೧–೮೩ರಂದು ಪ್ರಕರಣ ಕಳುಹಿಸುವುದಾಗಿ ಹೇಳಿದ್ದೀರಿ. ಅದು ಎಲ್ಲಿದೆ ? ಕೆಲಸವನ್ನು ಯಾವಾಗ ಪ್ರಾರಂಭಿಸುತ್ತೀರಿ ? ಇದರ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸಾಮಾನ್ಯವಾಗಿ ೩ ತಿಂಗಳೊಳಗೆ ಭೂಮಿಯನ್ನು ನಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು. ರೈತಾಪಿ ಮತ್ತು ಲೋಕೋಪಯೋಗಿ ಇಲಾಖೆಯವರು ಜಂಟಿಯಾಗಿ ಪರಿಶೀಲಿಸಿ ೮೦ ಭಾಗ ಹಣ ಕೊಟ್ಟ ಮೇಲೆ ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು. ಆದರೆ ಸಾಮಾನ್ಯವಾಗಿ ಕೆರೆಗಳನ್ನು ಮಾಡಬೇಕೆಂದರೆ ಭೂಮಾಲೀಕರ ಪ್ರತಿಭಟನೆ ಇರುತ್ತದೆ. ಆಗ ಅದನ್ನು ಸ್ವಾಧೀನಪಡಿಸಿಕೊಳ್ಳಲು ಸ್ವಲ್ಪ ವಿಳಂಬವಾಗುತ್ತದೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಈ ಕೆಲಸವನ್ನು ಕಾಂಟ್ರಾಕ್ಟ್ ಕೊಟ್ಟಿದ್ದೀರೋ ಅಥವಾ ಕೊಡಬೇಕಾಗಿದೆಯೋ ? ೧೯೮೭ ರೊಳಗೆ ಕೆಲಸ ಪೂರ್ತಿ ಮಾಡುತ್ತೇವೆಂದು ಹೇಳಿದ್ದೀರಿ. ಅದನ್ನು ಎರಡು ವರ್ಷ ಮುಂಚಿತವಾಗಿ ಮುಗಿಸುವುದಕ್ಕೆ ವಿಶೇಷ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಒಂದು ಸಾರಿ ಕೆಲಸ ಪ್ರಾರಂಭವಾದ ಮೇಲೆ ವಿಳಂಭವಾಗುವುದಕ್ಕೆ ಕಾರಣವಿಲ್ಲ. ಆ ಒಂದು ಕಾಲಮಿತಿಯೊಳಗೆ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಅದಕ್ಕೆ ಏಜೆನ್ಸಿ ಗೊತ್ತು ಮಾಡಿದ್ದೀರಾ ? ಯಾರಿಗೆ ಕಾಂಟ್ರಾಕ್ಟ್ ಕೊಟ್ಟಿದ್ದೀರಿ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇನ್ನೂ ಯಾರಿಗೂ ಕಾಂಟ್ರಾಕ್ಟ್ ಕೊಟ್ಟಿಲ್ಲ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಬಹುಶಃ ಮಂತ್ರಿಗಳಿಗೆ ವರದಿಯಾಗಿಲ್ಲವೆಂದು ಕಾಣುತ್ತದೆ. ಈಗಾಗಲೇ ಕಾಂಟ್ರಾಕ್ಟ್ ಕೊಡಲಾಗಿದೆಯೆಂದು ನನಗೆ ತಿಳಿದುಬಂದಿದೆ. ಆದ್ದರಿಂದ ದಯವಿಟ್ಟು ಅದರ ಬಗ್ಗೆ ಮಾಹಿತಿ ಒದಗಿಸಬೇಕು.

(ಉತ್ತರವಿಲ್ಲ)

ಬಾದಾಮಿ ತಾಲ್ಲೂಕು ಕೊಂಕನಕೊಪ್ಪ ಹಾಗೂ ಹುಲಸಗೇರಿ ಮಧ್ಯದಲ್ಲಿ ಸಂಗ್ಮೇಶ್ವಾಡಿ ಹಳ್ಳಿಗೆ ಒಡ್ಡು ಹಾಕಿ ರೈತರಿಗೆ ನೀರು ಸರಬರಾಜು ಮಾಡುವ ಕುರಿತಂ

೭೯ (೩೮) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದ ಗುಡ್ಡ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಗುಳೇದಗುಡ್ಡ ಕ್ಷೇತ್ರದ ಬಾದಾಮಿ ತಾಲ್ಲೂಕಿನಲ್ಲಿ ಕೊಂಕಣ ಕೊಪ್ಪ ಹಾಗೂ ಹುಲಸಗೇರಿ ಗ್ರಾಮಗಳ ಮಧ್ಯದಲ್ಲಿ ಇರುವ ಸಂಗ್ಮೇಶ್ವಾಡಿ ಹಳ್ಳಕ್ಕೆ ಒಡ್ಡು ಹಾಕಿ ರೈತರಿಗೆ ನೀರು ಸರಬರಾಜು ಮಾಡುವ ಯೋಜನೆಯು ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅದರ ವಿವರಗಳೇನು ಮತ್ತು ಈಗಿರತಕ್ಕ ನೀರಾವರಿ ಯೋಜನೆಯನ್ನು ಸರ್ಕಾರ ಕೈಕೊಳ್ಳುವುದೇ ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ನಾನು (ಅ) ಪ್ರಶ್ನೆಯಲ್ಲಿ ಕೇಳಿರುವ ಯೋಜನೆಗಳ ಬಗ್ಗೆ ಈಗಾಗಲೇ ಭೂಮಿ ಸರ್ವೆ ಕೂಡ ನಡೆದು ಅದರ ಬಗ್ಗೆ ಸಾಕಷ್ಟು ನೀಲಿ ನಕ್ಷೆಗಳನ್ನು ತಯಾರಿಸಿರುವಾಗ 'ಇಲ್ಲ, ಉದ್ಭವಿಸುವುದಿಲ್ಲ' ಎಂದು ಮಂತ್ರಿಗಳು ಉತ್ತರಿಸಬೇಕಾದರೆ ಬಹುಶಃ ಅವರಿಗೆ ಸತ್ಯಕ್ಕೆ ದೂರವಾದ ಮಾಹಿತಿ ದೊರಕಿರಬಹುದು. ಆದ್ದರಿಂದ. ದಯವಿಟ್ಟು ಇದನ್ನು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಈ ಯೋಜನೆಯಿಂದ ೮ ಹಳ್ಳಿಗಳಿಗೆ ನೀರಾವರಿ ಆಗುತ್ತದೆ. ಕೇವಲ ಒಂದು ಹಳ್ಳಿಯನ್ನು ಗಮನದಲ್ಲಿಟ್ಟುಕೊಂಡು ೮ ಹಳ್ಳಿಗಳಿಗೆ ನೀರಾವರಿ ಆಗುವುದನ್ನು ತಪ್ಪಿಸುವುದು ಬೇಡ. ಬಿಜಾಪುರ ಜಿಲ್ಲೆಯಲ್ಲಿ ಬಾದಾಮಿ ತಾಲ್ಲೂಕು ಅತ್ಯಂತ ಹಿಂದುಳಿದ ತಾಲ್ಲೂಕು. ಅಲ್ಲಿ ಯಾವುದೇ ನೀರಾವರಿಗೆ ಆಸ್ಪದ ಇಲ್ಲ. ಈ ಒಂದು ನೀರಾವರಿ ಯೋಜನೆ ಮಾಡಿಕೊಟ್ಟರೆ ೮ ಹಳ್ಳಿಯ ಜನರಿಗೆ ಅನುಕೂಲವಾಗುತ್ತದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಆ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ ಸಂಶಯ ಇಲ್ಲ. ಆದರೆ ಈ ಆಯವ್ಯಯದಲ್ಲಿ ಹಣ ಒದಗಿಸದೆ ಇರುವುದರಿಂದ ಪ್ರಾರಂಭಿಸಿಲ್ಲ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ. —ಈ ವರ್ಷದ ಆಯವ್ಯಯದಲ್ಲಿ ಅದನ್ನು ಸೇರಿಸುತ್ತೀರಾ ?

ಶ್ರೀ ಆರ್.ಎನ್. ಲಕ್ಷ್ಮೀಪತಿ.—ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಈ ಸಾರಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಸೂಳೆಕೋಟೆ ಬಳಿ ಸೇತುವೆ ನಿರ್ಮಾಣದ ಬಗ್ಗೆ

೫೦ (೬೩) ಶ್ರೀ ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ). —ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಪಿರಿಯಾಪಟ್ಟಣ ಮತ್ತು ಸೋಮವಾರ ಪೇಟೆಗೆ ಸಂಪರ್ಕವೇರ್ಪಡಿಸುವ ಸೂಳೆಕೋಟೆ ಸೇತುವೆ ಮಂಜೂರಾಗಿದೆಯೆ?

ಆ) ಹಾಗಿದ್ದಲ್ಲಿ ಟೆಂಡರ್ ಆಗಿದೆಯೇ?

ಇ) ಆಗಿದ್ದರೆ, ನಿಧಾನವಾಗುವುದಕ್ಕೆ ಕಾರಣವೇನು ಮತ್ತು ಯಾವಾಗ ಈ ಕೆಲಸ ಮುಕ್ತಾಯವಾಗುತ್ತದೆ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಮಂಜೂರಾಗಿದೆ.

ಆ) ಈ ಕೆಲಸಕ್ಕೆ ಟೆಂಡರ್‌ಗಳು ಬಂದಿದೆ.

ಇ) ಬಂದಿರುವ ಟೆಂಡರ್‌ಗಳು ಪರಿಶೀಲನೆಯಲ್ಲಿವೆ. ಮುಂದಿನ ಕ್ರಮ ಪರಿಶೀಲಿಸಿದ ನಂತರ ಕೈಗೊಳ್ಳಲಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ.—ಅದರ ಜೊತೆಗೆ ಕೆಲವು ಅಂಶಗಳನ್ನು ಹೇಳಬಯಸುತ್ತೇನೆ. ಈ ಯೋಜನೆಗೆ ೪೨ ಲಕ್ಷ ರೂಪಾಯಿ ಮಂಜೂರಾಗಿದೆ. ಮೊದಲು ನಾವು ಮಾರ್ಚ್‌ನಲ್ಲಿ ಟೆಂಡರ್ ಕರೆದಾಗ ಯಾರೂ ಬರಲಿಲ್ಲ ಎರಡನೇ ಸಾರಿ ಕರೆದಾಗ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ನವರು ಅರ್ಜಿ ಹಾಕಿದರು. ಆದರೆ ಅವರು ಶೇಕಡ ೯೨ರಷ್ಟು ಹೆಚ್ಚು ಮೊತ್ತ ಸೂಚಿಸಿದ್ದರಿಂದ ಅವರ ಟೆಂಡರನ್ನು ತಿರಸ್ಕಾರ ಮಾಡಿದೆವು. ಮತ್ತೆ ಮೂರನೇ ಸಾರಿ ಕರೆದಾಗ ೪ ಜನ ಅರ್ಜಿ ಹಾಕಿದರು. ಅದರಲ್ಲಿ, ೧) ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್, ೨) ಮಹಮದ್, ಬೆಳಗಾಂ, ೩) ಮೆಸರ್ಸ್ ಹಿಂದೂಸ್ಥಾನ್ ಲಿಮಿಟೆಡ್ ಮತ್ತು ೪) ಜಯವಾಣ ಸಿಂಧ್ಯ ಎಂಬುವರು ಹಾಕಿದರು. ಅದರ ಬಗ್ಗೆ ತೀರ್ಮಾನ ಕೈಗೊಳ್ಳಲು ೩೦-೧-೮೪ರವರೆಗೆ ಅವಕಾಶ ಇದೆ.

ಶ್ರೀ ಕೆ.ಎಸ್. ಕಾಳಮರಿಗೌಡ. ಈ ಕೆಲಸಕ್ಕೆ ಟೆಂಡರ್ ಬಂದಿದೆ ಎಂದು ಹೇಳಿದಿರಿ. ಮೊದಲು ಕರೆದಾಗಲೂ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಟೆಂಡರ್ ಹಾಕಿತ್ತು ಎಂದು ಹೇಳಿದಿರಿ ಮತ್ತೆ ಈಗಲೂ ಹಾಕಿದೆ ಎಂದು ಹೇಳಿದ್ದೀರಿ. ಅಲ್ಲದೆ ಮೊದಲ ಬಾರಿ ಕರೆದಾಗ ಶೇಕಡ ೯೨ರಷ್ಟು